ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 2, May-June 2026, Pp. 132-139
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಹೆಣ್ಣಿನ ಎದೆಯ ಹಣತೆ ಬೆಳಗಿದಾಗ – ಕಥಾವಲೋಕನ

**ಅರ್ಪಿತ ಕುಮಾರ್[1] ಮತ್ತು ಡಾ. ಬಿ. ಪ್ರಭುಸ್ವಾಮಿ[2]**
[1]ಸಂಶೋಧನಾ ವಿದ್ಯಾರ್ಥಿ, [2]ಮಾರ್ಗದರ್ಶಕರು
ಕನ್ನಡ ಸ್ನಾತಕೋತ್ತರ ಮತ್ತು ಸಂಶೋಧನಾ ವಿಭಾಗ, ಜೆಎಸ್ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು,
ಊಟಿ ರಸ್ತೆ, ಮೈಸೂರು

**Abstract:**
*ನವೋದಯ, ನವ್ಯ, ಪ್ರಗತಿಶೀಲ, ದಲಿತ, ಬಂಡಾಯ ಮುಂತಾದ ಎಲ್ಲಾ ಕಾಲಘಟ್ಟದಲ್ಲೂ ಸಣ್ಣ ಕಥೆಯ ಕೃಷಿ ನಡೆದಿದೆ. ದೈನಂದಿನ ಬದುಕು ಸಾಗುವ ದಾರಿಯಲ್ಲಿ ನೋವು–ನಲಿವು, ಸುಖ–ದುಃಖ, ಭಯ–ಆತಂಕ ಜೊತೆಗೆ ಸಮಾಜದ ತುಡಿತ ಮಿಡಿತಗಳು ಕಥೆಗೆ ವಸ್ತುಗಳಾಗಬಹುದು. ದಲಿತ, ಸ್ತ್ರೀ, ಮುಸ್ಲಿಂ ಸಂವೇದನೆಯ ನೆಲೆಯಲ್ಲಿ ಹಲವು ಕಥೆಗಾರರು ಮತ್ತು ಕಥೆಗಾರ್ತಿಯರು ಕಥೆಗಳನ್ನು ಎಣೆದು ಕನ್ನಡ ಸಾಹಿತ್ಯ ಲೋಕಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ. ಇತ್ತೀಚೆಗಷ್ಟೇ ಬಾನು ಮುಸ್ತಾಕ್‌ರವರು ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿಯನ್ನು ಪಡೆದರು. ಇವರ 'ಎದೆಯ ಹಣತೆ' ಎಂಬ ಕಥಾ ಸಂಕಲನವನ್ನು ದೀಪಾ ಭಸ್ತಿರವರು ಇಂಗ್ಲಿಷಿನಲ್ಲಿ ಹಾರ್ಟ್ ಲ್ಯಾಂಪ್ (heart lamp) ಎಂಬ ಹೆಸರಿನೊಂದಿಗೆ ಅನುವಾದಿಸಿ ವಿಶ್ವಮಟ್ಟದಲ್ಲಿ ಕನ್ನಡ ಸಾಹಿತ್ಯ ಮೆರಗು ಪಡೆಯುವಂತೆ ಮಾಡಿದರು. ಬಾನು ಮುಸ್ತಾಕ್‌ರವರ ಎಲ್ಲಾ ಕಥೆಗಳನ್ನು 'ಹಸೀನಾ ಮತ್ತು ಇತರ ಕಥೆಗಳು' ಎಂಬ ಕಥಾಸಂಕಲನದ ಹೆಸರಿನೊಂದಿಗೆ ಹೊರತರಲಾಗಿದೆ. ಇದರಲ್ಲಿ ಮೂವತ್ತೇಳು ಸಣ್ಣಕಥೆಗಳಿದ್ದು ಇವುಗಳಲ್ಲಿ ಬಹುತೇಕ ಕಥೆಗಳು ಮುಸ್ಲಿಂ ಸಂವೇದನೆಯನ್ನೊಳಗೊಂಡಿವೆ. ಇಸ್ಲಾಂ ಸಮಾಜದ ಮಹಿಳೆಯರ ಸ್ಥಾನಮಾನ, ಧಾರ್ಮಿಕ ಹೆಸರಿನಲ್ಲಿ ನಡೆಯುವ ಶೋಷಣೆ ಇವರ ಕಥೆಗಳಲ್ಲಿ ಅನಾವರಣಗೊಂಡಿದೆ. ಅವುಗಳಲ್ಲಿ ಬಾನು ಮುಸ್ತಾಕ್‌ರವರ 'ಎದೆಯ ಹಣತೆ' ಕಥೆಯು ವಿಶಿಷ್ಟವಾದುದು.*

**Keywords:** *ಎದೆಯ ಹಣತೆ, ಮುಸ್ಲಿಂ ಸಂವೇದನೆ, ಸ್ತ್ರೀ ಸಂವೇದನೆ, ತಲಾಕ್, ಖೂನಿ, ಖುಲಾ, ಗಂಡು ಹೆಣ್ಣಿನ ಸಂಬಂಧ, ಸಂಪ್ರದಾಯ, ತವರು, ಬಾನು ಮುಸ್ತಾಕ್, ಪುರುಷ ಪ್ರಧಾನ ಸಮಾಜ*

## ಪೀಠಿಕೆ

ಮನುಷ್ಯ ಸಂಘಜೀವಿ ಒಂಟಿಯಾಗಿ ಜೀವಿಸಲಾರ, ಅನಾಗರಿಕತೆಯ ಕಾಲದಿಂದ ಇಂದಿನವರೆಗೂ ಒಬ್ಬರನ್ನೊಬ್ಬರನ್ನು ಅವಲಂಬಿಸಿಕೊಂಡು ಬದುಕುತ್ತಲೇ ಬರುತ್ತಿದ್ದಾನೆ. ಇನ್ನು ಈ ಮನುಷ್ಯ ಕುಲದಲ್ಲಿ ಗಂಡು ಮತ್ತು ಹೆಣ್ಣಿಗೆ ಅವರದೇ ಆದ ಮಹತ್ವವಿದೆ. ಒಂದು ಗಂಡಿಗೆ ಒಂದು ಹೆಣ್ಣು, ಅವರು ಕೂಡಿ ಬಾಳುವುದೇ ಮನುಷ್ಯ ಧರ್ಮವಾಗಿದೆ. ಜೊತೆಗೆ ಗಂಡು ಮತ್ತು ಹೆಣ್ಣಿನ ನಡುವೆ ಪ್ರೀತಿ, ಪ್ರೇಮ, ಸ್ನೇಹ, ವಿವಾಹ ಮುಂತಾದ ಹಲವು ವಿಷಯಗಳು ಸಂಪ್ರದಾಯ ಅಥವಾ ರೂಢಿಗತವಾಗಿ ಬೆಳವಣಿಗೆ ಹೊಂದಿವೆ. ಇದೇ ನೆಲೆಯಲ್ಲಿ ನೋಡಬೇಕಾದ ಕಥೆಯೇ ಬಾನುಮುಸ್ತಾಕ್‌ರವರ ಎದೆಯ ಹಣತೆ.

**Please cite this article as:** ಅರ್ಪಿತ ಕುಮಾರ್ ಮತ್ತು ಬಿ. ಪ್ರಭುಸ್ವಾಮಿ. (2026). ಹೆಣ್ಣಿನ ಎದೆಯ ಹಣತೆ ಬೆಳಗಿದಾಗ – ಕಥಾವಲೋಕನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 5(2), 132–139

ಎದೆಯ ಹಣತೆ ಮುಸ್ಲೀಂ ಸಮುದಾಯದ ಹೆಣ್ಣೊಬ್ಬಳ ನೋವಿನ ದನಿಯಾಗಿ ಕಥೆ ಕಟ್ಟಲ್ಪಟ್ಟಿದೆ. **'ಮೆಹರುನ್'** ಎಂಬ ಹೆಣ್ಣೊಬ್ಬಳ ನೋವಿನ ಸುತ್ತ ಕಥೆ ಸಾಗುತ್ತದೆ. ಮೆಹರುನ್ ತನ್ನ ಗಂಡನ ಬೇರೆ ಹೆಣ್ಣಿನ ಸಂಗಡದ ವಿಚಾರವನ್ನು ತಿಳಿದು ಮನನೊಂದು ತಂದೆಯ ಮನೆಗೆ ಆಸರೆಗೆಂದು ಬರುತ್ತಾಳೆ. ಆದರೆ ಈಕೆ ಬಂದಿದ್ದೇ ತಡ ಮನೆ-ಮಂದಿಯೆಲ್ಲಾ ಬೇರೆ ಗ್ರಹದಿಂದ ಬಂದಂತಹ ಜೀವಿಯಂತೆ ಈಕೆಯನ್ನು ನೋಡುತ್ತಾರೆ. ತಂದೆಯಾಗಲಿ, ತಾಯಿಯಾಗಲಿ ಅಣ್ಣ-ತಮ್ಮಂದಿರಾಗಲಿ, ಮನೆಯ ಯಾವ ಸದಸ್ಯರು ಸಹ ಒಳಗೆ ಬಾ ಎನ್ನುವುದಿಲ್ಲ. ದಿಕ್ಕಿಲ್ಲದವಳಂತೆ ಮನೆಯವರ ಮುಂದೆ ನಿಲ್ಲುತ್ತಾಳೆ. ಒಂದು ಹೆಣ್ಣಿಗೆ ಮದುವೆಯಾದ ನಂತರ ಗಂಡನ ಮನೆಯೇ ಎಲ್ಲ. ಎಷ್ಟೇ ಕಷ್ಟಗಳು ಬಂದರೂ, ಸಮಸ್ಯೆಗಳ ಸುಳಿಯಲ್ಲಿ ಸಿಲುಕಿದರು ತನ್ನೆಲ್ಲ ಕಷ್ಟಗಳನ್ನು ಅಲ್ಲಿಯೇ ಅನುಭವಿಸಬೇಕು ಎನ್ನುವ ಮನಸ್ಥಿತಿ ನಿರ್ಮಾಣವಾಗಿ ಬಿಟ್ಟಿದೆ. ಗಂಡನ ಮನೆಯನ್ನು ಬಿಟ್ಟು ತವರು ಮನೆಗೆ ಬಂದ ಹೆಣ್ಣನ್ನು ಸಮಾಜ ನೋಡುವ ಭಾವವೇ ಬೇರೆ, ಸಮಾಜಕ್ಕೆ ಹೆದರಿ ಎಷ್ಟೇ ಕಷ್ಟಗಳಿದ್ದರೂ ಗಂಡನ ಮನೆಯಲ್ಲಿಯೇ ಇರಬೇಕು ಎನ್ನುವ ಎಷ್ಟೋ ಹೆಣ್ಣು ಮಕ್ಕಳ ಕುಟುಂಬಗಳು ಇವೆ. ಇದು ಕೇವಲ ಎದೆಯ ಹಣತೆ ಕಥೆಯ ಮೆಹರುನ್ ಎಂಬ ಒಂದು ಹೆಣ್ಣಿನ ಕಥೆಯಲ್ಲ ಎಲ್ಲ ಜಾತಿ, ಧರ್ಮ, ಸಮುದಾಯದಲ್ಲಿ ಈ ರೀತಿ ತೊಂದರೆಗೊಳಗಾದ ಹೆಣ್ಣು ಮಕ್ಕಳ ಸಮಸ್ಯೆಯಾಗಿದೆ. ಆದರೆ ಒಂದು ಸಮುದಾಯದಲ್ಲಿ ಹೆಚ್ಚಿರಬಹುದು ಮತ್ತೊಂದು ಸಮುದಾಯದಲ್ಲಿ ಕಡಿಮೆ ಇರಬಹುದು. ಇಂತಹ ಮನಸ್ಥಿತಿಗಳು ಸಮಾಜದಲ್ಲಿ ಬದಲಾವಣೆಯಾಗಬೇಕಿದೆ. ಇನ್ನು ತವರಿಗೆ ಬಂದ ಮೆಹರುನ್‌ಳ ನೋವನ್ನು ಸಹ ಕೇಳದೆ "ಮೆಹರ್... ಮನೆಯಲ್ಲಿ ಹೇಳಿ ಬಂದೆಯಾ?....... ಯಾಕೆ ಹೇಳಿ ಬಂದಿಲ್ಲ. ನಮ್ಮ ಮರ್ಯಾದೆ ಕಳಿಬೇಕೂಂತ ಪೂರ್ತ ಮನಸ್ಸು ಮಾಡಿರೋ ಆಗಿದೆ ನೀನು"[1] ಎಂದು ಮೆಹರುನ್ ತಾಯಿ ಹೇಳುತ್ತಾಳೆ. ಕಷ್ಟಗಳಿಂದ ನೊಂದು ಬಂದ ಮಗಳಿಗೆ ಸಾಂತ್ವನದ ಮಾತುಗಳಿಲ್ಲದೆ, ಗಂಡನ ಮನೆಯಿಂದ ಬಂದಿರುವುದು ನಮ್ಮ ಮಾನ ಕಳೆದಂತೆ ಎಂದು ಮೆಹರುನ್ ತಾಯಿ ಆಡುವ ಮಾತುಗಳು ಅವಳನ್ನು ಇನ್ನಷ್ಟು ನೋವುಗಳನ್ನು ಅನುಭವಿಸುವಂತೆ ಮಾಡುತ್ತವೆ. ಆಸರೆಗೆಂದು ಬಂದ ಈಕೆ ಮನೆ ಮಂದಿಯ ವರ್ತನೆಯಿಂದ ವಿಚಲಿತಳಾಗುತ್ತಾಳೆ.

ತವರು ಮನೆಗೆ ಬಂದ ಮೆಹರುನ್ ಮತ್ತು ಅವಳ ತಾಯಿಯ ನಡುವೆ ಒಂದಷ್ಟು ಮಾತುಕತೆಗಳು ನಡೆಯುತ್ತವೆ. ಗಂಡನ ಜೊತೆ ನಾನು ಬದುಕಲಾಗುವುದಿಲ್ಲಾ, ಮತ್ತೆ ಆ ಮನೆಗೆ ಕಳುಹಿಸಿದರೆ ಬೆಂಕಿ ಹಾಕೊಂಡು ಸಾಯ್ತಿನಿ ಎಂದು ಮೆಹರುನ್ ಹೇಳುತ್ತಾಳೆ. ಮಧ್ಯೆ ಪ್ರವೇಶಿಸಿದ ಅವಳ ಅಣ್ಣನ ಮಾತು ಪುರುಷ ಸಮಾಜದ ದರ್ಪಕ್ಕೆ ಹಿಡಿದ ಕನ್ನಡಿಯಂತಿದೆ. "ಅತಿಯಾಯ್ತು ಮೆಹರ್. ಸಾಯೋರಾರೂ ಹೇಳ್ಕೊಂಡ್ ತಿರುಗಲ್ಲ. ವಂಶದ ಮರ್ಯಾದೆ ಪ್ರಜ್ಞೆ ಇದ್ದಿದ್ರೆ... ನೀನು ಇಲ್ಲಿಗೆ ಬರೋ ಬದ್ಲು ಅದ್ನೆ ಮಾಡ್ತಿದ್ದೆ. ಯಾವ ಮನೆಗೆ ನಿನ್ನ ಡೋಲಿ (ವಧುನ್ನು ಹೊತ್ತೊಯ್ಯುವ ಪಲ್ಲಕ್ಕಿ) ಹೋಯಿತೋ ಅದೇ ಮನೆಯಿಂದ ನಿನ್ನ ಡೋಲ (ಶವವಾಹಕ) ಹೊರಬರಬೇಕು. ಅದು ಮಾನವಂತ ಹೆಣ್ಣಿನ ಬದುಕು"[2]. ಎನ್ನುತ್ತಾನೆ. ಇಂದಿನಿಂದಲೂ ಸಂಪ್ರದಾಯದ ಹೆಸರಿನಲ್ಲಿ ಪುರುಷ ಪ್ರಧಾನವಾದ ಈ ವ್ಯವಸ್ಥೆಯಲ್ಲಿ ಹೆಣ್ಣಿಗೆ ಒಂದು ಚೌಕಟ್ಟನ್ನು ಮಾಡಿ ಅಷ್ಟರಲ್ಲಿಯೇ ಬದುಕಬೇಕೆಂಬ ವ್ಯವಸ್ಥೆಗೆ ಆಕೆಯನ್ನು ನೂಕಿಬಿಟ್ಟಿದ್ದೇವೆ. ಆ ಸಂಪ್ರದಾಯದ ಹೆಸರಿನಲ್ಲಿ ಹೆಣ್ಣಿಗೆ ಆಗುತ್ತಿರುವ ಶೋಷಣೆಗಳು ಒಂದೆರಡಲ್ಲ, ಇಂದಿಗೂ ಅದೇ ಸಂಪ್ರದಾಯಗಳು ಹೆಣ್ಣಿಗೆ ಕೆಟ್ಟ ಬಳುವಳಿಯಾಗಿ ಬಂದು ನಿಂತಿವೆ. ಮದುವೆಯಾದ ಮನೆಯಿಂದಲೇ ತನ್ನ ಶವವಾಹಕ ಹೋಗಬೇಕು ಎನ್ನುವ ಮೆಹರುನ್ ಅಣ್ಣನ ಮಾತಿನಲ್ಲಿ ಉರುಳಿಲ್ಲ. ಮತ್ತೆ ಗಂಡನ ಮನೆಗೆ ಕಳುಹಿಸಿದರೆ ಬೆಂಕಿ ಹಾಕಿಕೊಂಡು ಸಾಯ್ತಿನಿ ಎಂದರು ಸಹ ಅವಳ

ಮಾತಿಗೆ ಕಿಂಚಿತ್ತಾದರೂ ಕರುಣೆ ತೋರದ ಪೋಷಕರು ಆ ವ್ಯವಸ್ಥೆ ಅಮಾನವಿಯತೆಯ ಕೂಪವಿದ್ದಂತೆ. ಮದುವೆಯಾದ ಮನೆಯಿಂದಲೇ ಶವವಾಹಕ ಹೋಗಬೇಕು, ಹಾಗಿದ್ದರೆ ಮಾತ್ರ ಅವಳು ಮಾನವಂತ ಹೆಣ್ಣು ಮಗಳು, ಇಲ್ಲದಿದ್ದರೆ ಮಾನವಂತ ಹೆಣ್ಣು ಮಗಳಲ್ಲವೇ? ಎಂಬ ಪ್ರಶ್ನೆಯು ಹುಟ್ಟಿಕೊಳ್ಳುತ್ತದೆ. ಅದೆಷ್ಟೋ ಹೆಣ್ಣುಮಕ್ಕಳು ಗಂಡನ ಮನೆಯನ್ನು ತೊರೆದು ಸ್ವತಂತ್ರವಾಗಿ ಬದುಕಿ ಅಪ್ರತಿಮ ಸಾಧನೆಗೈದ ನಿದರ್ಶನಗಳು ನಮ್ಮಲ್ಲಿ ಇವೆ. ಪ್ರಸ್ತುತ ದಿನಮಾನಗಳಲ್ಲಿ ಮೆಹರುನ್‌ನ ಅಣ್ಣನಾಡುವ ಮಾತುಗಳು ಕೆಟ್ಟ ಮನಸ್ಥಿತಿಯ ಪ್ರತೀಕವಾಗಿದೆ. ಇಂತಹ ಸಂಪ್ರದಾಯಗಳು ಮತ್ತು ಆಲೋಚನೆ ಬದಲಾಗಬೇಕು. ಸಂವಿಧಾನಾತ್ಮಕವಾಗಿಯೂ ಹೆಣ್ಣಿನ ಸಬಲೀಕರಣಕ್ಕಾಗಿ ಹಲವು ಕಾನೂನುಗಳನ್ನು ಜಾರಿ ಮಾಡಲಾಗಿದೆ. ಆದರೆ ಅವು ಅಷ್ಟು ಸಮರ್ಪಕವಾಗಿ ಜಾರಿಯಾಗದಿರುವುದು ವಿಪರ್ಯಾಸ.

ಮೆಹರುನ್ ಗಂಡ ಇನಾಯತ್ ಬೇರೆ ಹೆಣ್ಣಿನ ಸಂಗ ಮಾಡಿ ಹೆಂಡತಿಯಾದವಳಿಗೆ ಮೋಸ ಮಾಡುತ್ತಿದ್ದರೂ ಸಹ ಕಿಂಚಿತ್ತು ಪಾಪಪ್ರಜ್ಞೆ ಎಂಬುದು ಅವನಲ್ಲಿಲ್ಲ. ಮನೆಯ ಯಜಮಾನನಾಗಿ ಯಾವ ರೀತಿಯಾದರು ಬದುಕಬಲ್ಲೆ ಎನ್ನುವ ದುರುಳು ಅಹಂಕಾರವನ್ನು ಈ ಪಾತ್ರ ಅಭಿವ್ಯಕ್ತಿಸುತ್ತದೆ. ಮೆಹರುನ್ ಹಿಂತಿರುಗಿ ತನ್ನ ಗಂಡನ ಮನೆಗೆ ಬರುವಾಗ ಗಂಡನಾಡಿದ ಮಾತುಗಳನ್ನು ನೆನಪಿಸಿಕೊಳ್ಳುತ್ತಾಳೆ. "ಹೆಣ್ಣಾದವಳಿಗೆ ಎಲ್ಲಿಯ ಸ್ವಾಭಿಮಾನ? ಏನು ಕಡಿಮೆ ಮಾಡಿದೀನಿ ನಿನಗೆ... ಉಡಲು... ಉಣ್ಣಲು? ನನ್ನನ್ನು ಯಾರು ತಡೆಯುವವರು? ನನ್ನ ಸುಖಕ್ಕೆ ಬೇಕಾದವಳನ್ನು ಕಂಡ್ಕೊಂಡಿದೀನಿ"[3] ಎನ್ನುವ ಮಾತಿನಲ್ಲಿ ಇನಾಯತ್‌ನ ಅಹಂಕಾರ ಹೆಣ್ಣನ್ನು ಆತ ನೋಡುವ ದೃಷ್ಟಿಕೋನ ಎದ್ದು ಕಾಣುತ್ತದೆ. ಹೆಂಡತಿಯಾದವಳಿಗೆ ಉಡಲು..... ತಿನ್ನಲು.... ನೋಡಿಕೊಂಡರೆ ಸಾಲದು ಅವಳ ನೋವುಗಳಿಗೆ ಮಿಡಿವ ಮನಸ್ಸಿರಬೇಕು, ಕಷ್ಟಗಳಲ್ಲಿ ಬಲ ಕೊಡುವ ತೋಳುಗಳಿರಬೇಕು, ಎನ್ನುವ ಒಂದು ಸಣ್ಣ ಪರಿಜ್ಞಾನವೂ ಕೂಡ ಇನಾಯತ್‌ನಲ್ಲಿ ಇಲ್ಲ. ಯಾವುದೇ ಹೆಣ್ಣು ಪರಪುರುಷನ ಸಂಗ ಮಾಡಿದರೆ ಅವಳನ್ನು ಸೂಳೆ, ನಡತೆಗೆಟ್ಟವಳು ಹೀಗೆ ಹಲವು ರೀತಿ ಕರೆಯುವುದುಂಟು. ಆದರೆ ಪುರುಷನಾದವನಿಗೆ ಇಂತಹ ಯಾವ ಹೆಸರುಗಳಿಲ್ಲ. ಅದರಲ್ಲೂ ಮುಸ್ಲಿಂ ಸಮುದಾಯದಲ್ಲಿ "ಒಂದು ಹೆಣ್ಣು ನೀತಿಗೆಟ್ಟವಳೆಂದು ಅಥವಾ ದಾಂಪತ್ಯದ್ರೋಹಿ ಎಂದು ಸಂದೇಹ ಬಂದರೆ ಸಾಕು ಆಗ ಆಕೆಯ ಗಂಡನೋ, ತಂದೆಯೋ ಅಥವಾ ಅಣ್ಣ–ತಮ್ಮಂದಿರು ಅವಳನ್ನು 'ಖೂನಿ' ಮಾಡಬಹುದೆಂದು ಮತ ನಿಯಮ ಇದೆಯಂತೆ"[4] 'ಖೂನಿ' ಎಂದರೆ ನೀತಿಗೆಟ್ಟವಳೆಂದರ್ಥ. ನೀತಿಗೆಟ್ಟವಳೆಂಬ ಗುಮಾನಿ ಹೆಣ್ಣನ್ನು ಸಾರ್ವಜನಿಕರು ಸಮಾಜದ ಮರ್ಯಾದೆಯನ್ನು ಉಳಿಸಲು ಕಲ್ಲಿನಿಂದ ಹೊಡೆದು ಸಾಯಿಸುವುದು ಒಂದು ವ್ಯವಸ್ಥೆ. ಹೆಣ್ಣು ತಪ್ಪು ಮಾಡಿದರೆ ಖೂನಿ ಅಂತಹ ಆಚರಣೆಯನ್ನು ಮಾಡಬಹುದಾದರೆ ಇದೇ ರೀತಿಯ ಕಟ್ಟು ಪಾಡುಗಳು ಗಂಡಿಗೂ ಸಹ ಇರಲೇಬೇಕಲ್ಲವೆ.. ಆದರೆ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಅದರಲ್ಲೂ ಮುಸ್ಲಿಂ ಸಮುದಾಯದಲ್ಲಿ ಇಂತಹ ವಿಧಿಗಳು ಕೇವಲ ಹೆಣ್ಣಿಗೆ ಮಾತ್ರ ಸೀಮಿತವಾಗಿವೆ. ಕೇವಲ ಮುಸ್ಲೀಂ ಸಮುದಾಯದಲ್ಲಿ ಮಾತ್ರವಲ್ಲ ಹಲವು ಸಮುದಾಯಗಳಲ್ಲಿ ಇದೇ ತರಹದ ವ್ಯವಸ್ಥೆ ಇದೆ.

ಈ ಕಥೆಯಲ್ಲಿ ತಲಾಕ್ ಕುರಿತಂತೆಯೂ ಬಾನು ಮುಸ್ತಾಕ್ ಮಾತನಾಡಿದ್ದಾರೆ. ಮೆಹರುನ್ ಮತ್ತು ಅವಳ ತಾಯಿ ಮಾತನಾಡುವ ಸಂದರ್ಭದಲ್ಲಿ "ನನ್ನನ್ನು ತೊರೆದು ಯಾವಳ ಹಿಂದೆಯೋ ಅಲೆದ ಮನುಷ್ಯನನ್ನು ನಾನು ಗಂಡ ಅಂತ ಗೌರವಿಸೋಕ್ಕೆ ಸಾಧ್ಯವಿಲ್ಲ......... ಇನ್ನು ಪ್ರೀತಿಸೋ ಮಾತು ದೂರವೇ ಉಳೀತು. ತಲಾಕ್ ಅವರು ಕೊಡೋದಲ್ಲ; ನಾನೇ ತಗೋತೀನಿ"[5] ಎಂದು ಹೇಳುವ ಮೆಹರುನ್ ಮಾತಿಗೆ ಯಾವ ಮನ್ನಣೆಯು ಸಿಗುವುದಿಲ್ಲ. ತಾಯಿ ಮತ್ತು ಅಣ್ಣ ಆಕೆಯನ್ನು ನಿಂದಿಸುತ್ತಾರೆ.

ಗಂಡನಾದವನು ಏನೇ ಮಾಡಿದರು ಸಹಿಸಿಕೊಂಡು ಹೋಗಬೇಕು, ಅವನು ಕೊಚ್ಚೆ ತುಳಿತಿದ್ದಾನೆ ನೀರ್ ಇರೋ ಕಡೆ ತುಳ್ಕೊಂಡು ಒಳಗೆ ಬರ್ತಾನೆ, ಅವನಿಗೆ ಯಾವ ಕಳಂಕನೂ ಇಲ್ಲ ಎಲ್ಲವನ್ನು ಸಂಭಾಳಿಸಿಕೊಂಡು ಎಚ್ಚರದಿಂದ ಇರಬೇಕು ಎಂದು ಆಕೆಗೆ ಎಚ್ಚರಿಸುತ್ತಾರೆ. ಕಷ್ಟವೋ, ಸುಖವೋ ಅವನೊಟ್ಟಿಗೆ ಬದುಕಬೇಕು ಎನ್ನುವ ಮಾತುಗಳು ತನ್ನ ತಾಯಿಯಿಂದ ಬರುತ್ತವೆ. ತವರು ಮನೆಯಿಂದ ಹೊರಟು ಗಂಡನ ಮನೆ ಸೇರಿದ ಮೆಹರುನ್ ಕೋಣೆಯನ್ನು ಸೇರುತ್ತಾಳೆ. ಆದರೆ ಅಲ್ಲಿಗೆ ಕಥೆ ಮುಗಿಯುವುದಿಲ್ಲ. ಆಕೆಯ ನೋವು ಮಾಸುವುದಿಲ್ಲ ಅಷ್ಟರಲ್ಲಿಯೇ ಬಂದ ಗಂಡ ಇನಾಯತ್ ತನ್ನ ಭಾವಂದಿರನ್ನು ಮಾತನಾಡಿಸಿ ಮೆಹರುನ್ ಬಳಿ ಬಂದು ಮಾತನಾಡಿಸುತ್ತಾನೆ. ಇವನ ಮಾತಿಗೆ ಯಾವುದೇ ಪ್ರತಿಕ್ರಿಯೆಯನ್ನು ಆಕೆ ನೀಡುವುದಿಲ್ಲ. ಮೆಹರುನ್ ಮೇಲೆ ಕೋಪಗೊಂಡ ಆತ ಅಲ್ಲೇ ಇದ್ದ ಸಲ್ಮಾಳಿಗೆ "ಸಲ್ಮಾ... ಬಾ ಇಲ್ಲಿ. ಈ ನಾಟಕ ಸಾಕು ಮಾಡು ಎಂದು ಅವಳಿಗೆ ಹೇಳು........... ಅವಳೇ ಉರುಳು ಹಾಕಿಕೊಂಡಂತಾಗುತ್ತದೆ. ನಾನು ಒಂದೇ ಉಸಿರಿನಲ್ಲಿ ಒಂದು... ಎರಡು... ಮೂರು ಅಂತ ಹೇಳಿ ಮುಗಿಸಿಬಿಡ್ತೀನಿ ಅಂತ ಹೇಳು... ಆಮೇಲೆ ಅವಳಿಗೇ ತಲಾಕ್ ಆಗಿ ಬಿಟ್ಟಮೇಲೆ ಅವಳ ತಂಗಿಯರನ್ನಾಗಲೀ ಅವಳ ಹೆಣ್ಣು ಮಕ್ಕಳನ್ನಾಗಲೀ ಹೇಗೆ ದಾಟಿಸುತ್ತಾಳೆನ್ನುವುದನ್ನು ನಾನೂ ನೋಡ್ತೀನಿ. ಅಂತ್ಹೇಳು..."[6] ಎಂದು ಹೇಳಿ ಅವಳಿಗೆ ಮರ್ಯಾದೆ ಪಾಠವನ್ನು ಮಾಡುತಾನ್ತೆ. ಅಡುಗೆ ಸಿದ್ಧ ಮಾಡಲು ಹೇಳುತ್ತಾನೆ. ಒಂದು ರೀತಿಯಲ್ಲಿ ಇದು ಬೆದರಿಕೆಯ ತಂತ್ರವಾಗಿದೆ. ಈ ಎರಡು ಸನ್ನಿವೇಶಗಳನ್ನು ಗಮನಿಸಿದರೆ, ಮೆಹರುನ್ ಹೇಳುವ ತಲಾಕ್ ಎಂಬ ಮಾತಿಗೆ ಯಾವ ಮನ್ನಣೆಯು ಇಲ್ಲ, ಮನೆಯವರು ವಿರೋಧ ವ್ಯಕ್ತಪಡಿಸುತ್ತಾರೆ. ಆದರೆ ಇನಾಯತ್ ಆಡುವ ತಲಾಕ್ ನೀಡುವೆನೆಂಬ ಮಾತಿಗೆ ಈ ಕಥೆಯಲ್ಲಿ ಮನ್ನಣೆ ಸಿಕ್ಕಿದಂತಿದೆ. ಏಕೆಂದರೆ ಮನೆಗೆ ಬಂದ ಅತಿಥಿಗಳ ಮುಂದೆ ಮಾನ ಮರ್ಯಾದೆ ಹರಾಜು ಹಾಕುತ್ತಿದ್ದಿಯಲ್ಲ ಎಂದು ಗುಡುಗಿ ಕೂಗಾಡಿ ಅಡುಗೆ ಸಿದ್ಧಮಾಡಲು ಹೇಳಿದಾಗ ಮೆಹರುನ್‌ಳಿಗೆ ಬೇರೆ ದಾರಿ ಇರುವುದಿಲ್ಲ. ಅಲ್ಲಿ ಅತಿಥಿಗಳಿಗೆ ಅಡುಗೆ ಸಿದ್ಧವಾಗುತ್ತದೆ. ಮುಸ್ಲಿಂ ಸಮುದಾಯದಲ್ಲಿ ದಂಪತಿಗಳಿಗೆ ಬದುಕಲು ಅಸಾಧ್ಯ ಅನಿಸಿದರೆ, ಪರಸ್ಪರ ಬದುಕಲು ಒಪ್ಪಿಗೆ ಇಲ್ಲದಿದ್ದರೆ ಅವರು ತಲಾಕ್ ಅನ್ನು ಪಡೆಯಬಹುದು. ಇದೇ ರೀತಿ ಈ ಸಮುದಾಯದಲ್ಲಿ ಹೆಣ್ಣಿಗಾಗಿಯೂ ವಿಶೇಷ ವಿಧಿಯೊಂದು ಇದೆ ಅದುವೇ 'ಖುಲಾ'. ಖುಲಾ ಎಂದರೆ ಪತ್ನಿಯು ಗಂಡನಿಂದ ವಿಚ್ಛೇದನ ಪಡೆದುಕೊಳ್ಳುವುದು. "ಗಂಡನೊಂದಿಗೆ ಸಹಬಾಳುವೆ ಅಸಾಧ್ಯವೆನ್ನುವ ಪ್ರಸಂಗ ಎದುರಾದರೆ ಪತ್ನಿಯು ಅವನಿಂದ ಬಿಡುಗಡೆ ಪಡೆದುಕೊಳ್ಳುವುದಕ್ಕೆ 'ಖುಲಾ' ಎನ್ನುವರು. ಇದು ಸ್ತ್ರೀಯ ಹಕ್ಕಾಗಿದೆ. ಆಕೆ ತನ್ನ ಪತಿಗೇನಾದರೂ ಪರಿಹಾರ (ಫಿದಿಯ) ಕೊಟ್ಟು ಅವನಿಂದ ತಲಾಕ್ ಪಡೆದುಕೊಳ್ಳುವ ಅವಕಾಶವಿದೆ. ತಲಾಕ್ ಹೇಗೋ ಖುಲಾ ಕೂಡ ಕೊನೆಯ ಅಸ್ತ್ರವಾಗಿದೆ"[7] ಆದರೆ 'ಖುಲಾ'ಕ್ಕೆ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಸ್ಥಾನವಿಲ್ಲ, ಕಥೆಗಳಲ್ಲಿಯೂ ಅದಕ್ಕೆ ಅವಕಾಶವಿಲ್ಲ.

ಈ ಕಥೆಯಲ್ಲಿ ಓದುಗರನ್ನು ಕಾಡುವ ಮತ್ತೊಂದು ಸಂಗತಿ ಎಂದರೆ ಮೆಹರುನ್ ಆತ್ಮಹತ್ಯೆ ಮಾಡಿಕೊಳ್ಳಲು ಮುಂದಾಗುವುದು. ಸಾಮಾನ್ಯವಾಗಿ ಇವಳ ಆತ್ಮಹತ್ಯೆಯ ನಿರ್ಧಾರ ಸರಿಯೇ? ತಪ್ಪೇ? ಎಂಬ ಹಲವು ಪ್ರಶ್ನೆಗಳು ಹುಟ್ಟಿಕೊಳ್ಳುವುದು ಸಹಜ. ಒಂದು ಕಡೆ ಅಪ್ಪಿ ಮುದ್ದಾಡಬೇಕಿದ್ದ ಗಂಡ ಯಾರದೋ ಪಾಲಾಗಿದ್ದಾನೆ, ಇನ್ನೊಂದೆಡೆ ಆಸರೆಗೆಂದು ಬಯಸಿ ಬಂದಿದ್ದ ತವರು ಮನೆಯವರು ಸಹ ಇವಳ ನಿರ್ಧಾರಕ್ಕೆ ಕವಡೆ ಕಾಸಿನ ಮೌಲ್ಯವನ್ನು ಕೊಡದೆ ಹಿಂತಿರುಗಿಸಿ ಗಂಡನ ಮನೆಗೆ ಕಳುಹಿಸಿದ್ದಾರೆ. ಈ ಎಲ್ಲಾ ಸಂದರ್ಭಗಳು ಅವಳಿಗೆ ಕಾಡುತ್ತಿರುವಾಗ ಬದುಕು ಭಾರವಾಗತೊಡಗಿತ್ತು. ಅವಳನ್ನು ಕೇಳುವವರು ಯಾರು ಇರಲಿಲ್ಲ ಛೇಡಿಸುವವರು ಸಹ ಯಾರು

ಇರಲಿಲ್ಲ. ಬೇರೆ ದಾರಿ ಇಲ್ಲದೆ ಆತ್ಮಹತ್ಯೆ ನಿರ್ಧಾರ ಮಾಡುತ್ತಾಳೆ. ತನ್ನ ಪುಟ್ಟ ಪುಟ್ಟ ಕಂದಮ್ಮಗಳು ನಿದ್ರಿಸುತ್ತಿರುವುದನ್ನು ಒಮ್ಮೆ ನೋಡಿ, ತನ್ನ ದೊಡ್ಡ ಮಗಳಾದ ಸಲ್ಮಾಳಿಗೆ ತನ್ನ ಎಲ್ಲ ಜವಾಬ್ದಾರಿಗಳನ್ನು ವಹಿಸಿ, ಅಡುಗೆ ಕೋಣೆಗೆ ಹೋಗಿ ಸೀಮೆಎಣ್ಣೆ ಕ್ಯಾನ್ ಹಿಡಿದು ಅಂಗಳಕ್ಕೆ ಬಂದು ನಿಂತು ಸೀಮೆಎಣ್ಣೆಯನ್ನು ತನ್ನ ಮೈ ಮೇಲೆ ಸುರಿದುಕೊಳ್ಳುತ್ತಾಳೆ. ನನ್ನ ಪಾಲಿಗೆ ಯಾರು ಇಲ್ಲ, ನಾನು ಯಾರಿಗೂ ಬೇಕಿಲ್ಲದ ಅಭಾಗಿನಿ ಎಂದು ವ್ಯಥೆಪಡುತ್ತಾಳೆ. ಆದರೆ ಅವಳು ಆತ್ಮಹತ್ಯೆಗೆ ಮುಂದಾದ ಸಂದರ್ಭದಲ್ಲಿ ಮನೆಯೊಳಗಿನ ಪರಿಸ್ಥಿತಿಯೇ ಬೇರೆ ಆಗಿತ್ತು. ಹಸುಗೂಸಿನ ಅಳುವು ತಾರಕ್ಕೇರಿತ್ತು. ಇದರಿಂದ ಎಚ್ಚರಗೊಂಡ ಸಲ್ಮಾ ಮಗುವನ್ನು ಎತ್ತಿಕೊಂಡು ಎದೆಗವಿಚಿಕೊಂಡು, ಬಾಗಿಲು ತೆರೆದಿದ್ದನ್ನು ಕಂಡು ಅಮ್ಮನ ಹತ್ತಿರ ಓಡಿ ಬಂದು, ಅಮ್ಮನ ಕಾಲುಗಳನ್ನು ಹಿಡಿದು ಪರಿಪರಿಯಾಗಿ ಬೇಡಿಕೊಳ್ಳುತ್ತಾಳೆ. ನಂತರ ಮೆಹರುನ್ ಎಚ್ಚರಗೊಂಡವಳಾಗಿ ಆಕೆಯನ್ನು ತಬ್ಬಿಕೊಂಡು 'ಕ್ಷಮಿಸು ಕಂದ' ಎಂದು ಸಲ್ಮಾಳನ್ನು ಬಿಗಿಯಾಗಿ ಅಪ್ಪಿಕೊಳ್ಳುತ್ತಾಳೆ. ಪ್ರಭಾತದ ಬೆಳಕು ಮಂದವಾಗಿ ಒತ್ತಿ ಉರಿಯಲು ಪ್ರಾರಂಭಿಸಿದೆ. ಮಕ್ಕಳಿಗಾಗಿಯಾದರೂ ಬದುಕಬೇಕೆಂಬ ಭರವಸೆಯು ಅವಳಲ್ಲಿ ಅನಿವಾರ್ಯವಾಗಿ ಮೂಡಿದೆ.

ಮೆಹರುನ್‌ನ ಹಿರಿಯ ಮಗಳು 'ಸಲ್ಮಾ'. ಸದಾ ಕಾಡುವ ಪಾತ್ರವಾಗಿ ಉಳಿಯುತ್ತಾಳೆ. ಹೆಣ್ಣಿನ ನೋವು ಹೆಣ್ಣಿಗಲ್ಲದೆ ಮತ್ತಾರಿಗೂ ಅರ್ಥವಾಗದು ಎನಿಸುವ ಪಾತ್ರವದು. ಮೆಹರುನ್‌ಳ ನೋವನ್ನು ಅರ್ಥ ಮಾಡಿಕೊಂಡಿರುವ, ಅವಳ ನೋವಿಗೆ ಮಿಡಿಯುವ ಏಕೈಕ ಹೃದಯವೆಂದರೆ ಅದು ಸಲ್ಮಾ. ಮೆಹರುನ್‌ನ ಎದೆಯ ಹಣತೆಯನ್ನು ಮತ್ತೆ ಬೆಳಗುವಂತೆ ಮಾಡುವವಳು ಇವಳೇ. ಗಂಡನ ಮೋಸದಾಟಕ್ಕೆ ನೊಂದ ಮೆಹರುನ್ ದುಃಖವನ್ನು ಆಕೆಯೊಡನೆ ಅನುಭವಿಸುವಳು. ತಾಯಿ ಮನೆ ಬಿಟ್ಟು ಹೋದಾಗಲೂ ತನ್ನ ತಂಗಿ ತಮ್ಮಂದಿರನ್ನು ಶಾಲೆಗೆ ಕಳುಹಿಸಿ ತಾನು ಮಾತ್ರ ತಾಯಿಯ ಬರುವಿಕೆಗಾಗಿ ಕಾಯುತ್ತಿದ್ದವಳು. ಮೆಹರುನ್ ವಾಪಸ್ಸು ತನ್ನ ಮಾವಂದಿರೊಡನೆ ಬಂದಾಗ ತಾಯಿಯ ಜೀವನ ಸರಿಯಾಗುವುದು, ಮಾವಂದಿರು ನನ್ನ ತಂದೆಗೆ ಬುದ್ಧಿ ಹೇಳಿ ಸರಿದಾರಿಗೆ ತರುತ್ತಾರೆ ಎಂಬ ಮಹಾದಾಸೆಯನ್ನು ಇಟ್ಟುಕೊಳ್ಳುತ್ತಾಳೆ. ಆದರೆ ಅವಳಿಗೂ ಸಹ ಈ ನಿರೀಕ್ಷೆ ಹುಸಿಯಾಗುತ್ತದೆ. ಇನಾಯತ್, ಮೆಹರುನ್ ಅಣ್ಣಂದಿರನ್ನು ನೋಡಿ ಸಲ್ಮಾಳ ಬಳಿ ಬಂದು ಮಾವಂದಿರು ಯಾವಾಗ ಬಂದರು ಎಂದು ಕೇಳಿದಾಗ ತನ್ನ ಚುರುಕು ಬುದ್ಧಿಯಿಂದ ಮಾವಂದಿರು ಈಗತಾನೆ ಬಂದರು ಅಮ್ಮಿ ಒಳಗೆ ಮಲಗಿದ್ದಾರೆ ಎಂದು ಜಾಣತನದಿಂದ ಉತ್ತರಿಸುತ್ತಾಳೆ. ಮೆಹರುನ್ ತವರು ಮನೆಗೆ ಹೋಗಿದ್ದ ವಿಷಯವನ್ನೇ ಮುಚ್ಚಿಡುತ್ತಾಳೆ. ಇನ್ನು ಮೆಹರುನ್ ಆತ್ಮಹತ್ಯೆ ಮಾಡಿಕೊಳ್ಳುವ ನಿರ್ಧಾರದ ನಂತರ ಸಲ್ಮಾಳ ಬಳಿ ಬಂದು "ಅನಾಥವಾಗುತ್ತಿರುವ ಈ ಕೂಸುಗಳಿಗೆ ನೀನೇ ತಾಯಿ ಕಂದಾ..."[8] ಎನ್ನುವ ಸಂದರ್ಭವು ಓದುಗರ ಮನಸ್ಸನ್ನು ಮುಟ್ಟುವಂತೆ ಮಾಡುತ್ತದೆ. ಮೆಹರುನ್ ಸೀಮೆಎಣ್ಣೆ ಸುರಿದುಕೊಂಡು ಅಂಗಳದಲ್ಲಿ ನಿಂತಾಗಲು ಸಹ ಮಗು ಅಳುವ ಸದ್ದಿನಿಂದ ಎಚ್ಚರಗೊಂಡು ಮಗುವನ್ನು ಎತ್ತಿಕೊಂಡು ಬಂದು ಅಮ್ಮನ ಪಾದದ ಕೆಳಗೆ ಇಟ್ಟು, 'ಅಮ್ಮಿ... ನಮ್ಮನ್ನು ಬಿಟ್ಟು ಹೋಗಬೇಡಿ' ಎಂದು ತಾಯಿಯ ಕಾಲ ಹಿಡಿದುಕೊಂಡು ಪರಿತಪಿಸುವ ಸಂದರ್ಭ ಅಳಿಸಲಾಗದಂಥದ್ದು ಪಾದಗಳನ್ನು ಹಿಡಿದು ಅವಳಾಡುವ ಮಾತುಗಳು ಮೆಹರುನ್ ಮನಸ್ಸನ್ನು ಕರಗಿಸುತ್ತದೆ. "ಅಮ್ಮಿ... ಅವರೊಬ್ಬರನ್ನು ಕಳೆದುಕೊಂಡ ರೋಷದಲ್ಲಿ ನಮ್ಮೆಲ್ಲರನ್ನೂ ಅವಳ ಕಾಲ ಬುಡಕ್ಕೆ ಎಸೆಯುವುದು ಸರಿಯಾ? ಅಬ್ಬಾಗೋಸ್ಕರ ಸಾಯಲು ಸಿದ್ಧಳಾಗಿರುವ ನೀನು ನಮಗಾಗಿ ಬದುಕಲು ಸಾಧ್ಯವಿಲ್ಲವೇ? ನಮ್ಮನೆಲ್ಲಾ ನೀನು ಹೇಗೆ ತಬ್ಬಲಿಗಳನ್ನಾಗಿ ಮಾಡಲು ಸಾಧ್ಯ ಅಮ್ಮಿ... ನಮಗೆ ನೀನು ಬೇಕು..."[9] ಎಂದು ಅತ್ತು

ಕರೆದು ರೋಧಿಸುತ್ತಾಳೆ. ಆ ಸಂದರ್ಭದಲ್ಲಿ ಸಲ್ಮಾಳನ್ನು ತಬ್ಬಿ ಕೊಂಡಾಗ ಎತ್ತರಕ್ಕೆ ಬೆಳೆದು ನಿಂತ ಗೆಳತಿಗಳ ಸಾಂತ್ವನ, ಸ್ಪರ್ಶ ಅವಳಿಗೆ ಸಿಕ್ಕಂತಾಗುತ್ತದೆ. ಏನಾದರೂ ಸಲ್ಮಾ ಎಚ್ಚರಗೊಳ್ಳದಿದ್ದರೆ ಮೆಹರುನ್ ಸಾವಿಗೆ ಶರಣಾಗುತ್ತಿದ್ದಾಳೋ ಏನೋ? ಮೆಹರೂನ್‌ಳ ಎದೆ ಹಣತೆ ಆರದಂತೆ ಕಾಪಾಡುವವಳು ಸಲ್ಮಾಳಾಗಿದ್ದಾಳೆ.

ಎದೆಯ ಹಣತೆ ಮುಸ್ಲಿಂ ಸಂವೇದನೆಯನ್ನು ಒಳಗೊಂಡ ಒಂದು ಸಣ್ಣ ಕಥೆ. ಮೆಹರುನ್ ಎಂಬ ಒಂದು ಹೆಣ್ಣಿನ ಪಾತ್ರದ ಮೂಲಕ ಕಥೆ ಸಾಗುತ್ತದೆ. ಗಂಡನನ್ನು ಬಿಟ್ಟು ಬಂದ ತನ್ನ ಕುಟುಂಬ ಹಾಗೂ ಸಮಾಜ ಹೇಗೆ ಆ ಹೆಣ್ಣನ್ನು ನೋಡುತ್ತದೆ, ಆ ಕುಟುಂಬದವರ ವರ್ತನೆ ಹೇಗಿದೆ ಎಂಬುದು ಈ ಕಥೆಯ ಮೂಲಕ ಓದುಗರಿಗೆ ಅರಿವಾಗುತ್ತದೆ. ಹೆಣ್ಣಿನ ಸಾಮಾನ್ಯ ಬದುಕಿಗೂ ಮನ್ನಣೆ ಸಿಗದಿರುವ ವ್ಯವಸ್ಥೆಯನ್ನು ಈ ಕಥೆ ಕಟ್ಟಿ ಕೊಟ್ಟಿದೆ. ಒಂದು ಕಡೆ ಗಂಡನಿಗಿರುವ ಬೇರೆ ಹೆಣ್ಣಿನ ಸಹವಾಸದಿಂದ ನೊಂದು, ಅವನೊಂದಿಗೆ ತಲಾಕ್ ತೆಗೆದುಕೊಳ್ಳುತ್ತೇನೆ ಎಂಬುದಕ್ಕೆ ಮನೆಯವರು ಆಸ್ಪದ ಇರುವುದಿಲ್ಲ. ಮತ್ತೊಂದಡೆ ಗಂಡಸಾದವನು ನಾನು, ಹೇಗಾದರೂ ಬದುಕಬಲ್ಲೆ ಎನ್ನುವ ಪುರುಷಾಹಂಕಾರ ಈಕೆಯ ಗಂಡನದು. ಇವುಗಳ ಮಧ್ಯೆ ಸಿಲುಕಿ ಹೆಣ್ಣಿನ ಅಶೋತ್ತರಗಳಿಗೆ ಮನ್ನಣೆಯೇ ಸಿಗದ ನೆಲೆಯಲ್ಲಿಯೇ ಈ ಕಥೆ ಸಾಗುತ್ತದೆ. ಜೊತೆಗೆ ಈ ಸಮಾಜ ಹೆಣ್ಣಿಗಾಗಿ ಹಲವು ಸಂಪ್ರದಾಯ, ಕೆಟ್ಟ ಕಟ್ಟುಪಾಡುಗಳನ್ನು ಕಾಲದಿಂದ ಕಾಲಕ್ಕೆ ಬಳುವಳಿಯಾಗಿ ಉಳಿಸಿಕೊಂಡು ಬಂದಿದೆ, ಮದುವೆಯ ನಂತರ ಒಂದು ಹೆಣ್ಣು ಕಷ್ಟವೋ ಸುಖವೋ ಗಂಡನೊಂದಿಗೆ ಬದುಕಬೇಕು, ಮದುವೆಯಾದ ಮನೆಯಿಂದಲೇ ತನ್ನ ಶವವಾಹಕ (ಚಟ್ಟ) ಹೋಗಬೇಕು, ಅದುವೇ ಮಾನವಂತ ಹೆಣ್ಣಿನ ಲಕ್ಷಣ ಎಂಬಂತಹ ಹಲವು ಸಂಪ್ರದಾಯ ಸಂಕೋಲೆಗಳನ್ನು ಈ ಸಮಾಜ ಬೆಸೆದು ಬಿಟ್ಟಿದೆ. ಇಂತಹ ಸಂಪ್ರದಾಯಗಳನ್ನು ದೂರ ಮಾಡಿ ಹೆಣ್ಣಿಗೆ ಅವಳ ಆಸೆಗಳಿಗೆ ಬೆಲೆ ಕೊಡುವ, ಸಮಾನ ಅವಕಾಶಗಳನ್ನು ನೀಡುವ ಸಮಾಜ ನಮಗೆ ಬೇಕು. ಈ ಕಥೆಯಲ್ಲಿ ಹೆಣ್ಣಿನ ಬದುಕಿನ ಬಗೆಗೆ ಯಾವುದೇ ನಿರ್ಧಾರ ಕೈಗೊಳ್ಳುವಾಗಲು ಸರಿ ತಪ್ಪುಗಳ ಚರ್ಚೆಯೇ ಆಗುವುದಿಲ್ಲ. ಆ ಮನೆಗೆ ಹೋಗುವುದಿಲ್ಲ ಎಂದರು ಸಹ ಅವಳ ನಿರ್ಧಾರಕ್ಕೆ ಸಮ್ಮತಿ ಇಲ್ಲ, ಮತ್ತದೇ ಗಂಡನ ಮನೆಗೆ ಕಳುಹಿಸುತ್ತಾರೆ. ಆ ಗಂಡನ ಮನೆಯಲ್ಲಿಯೂ ಸಹ ಅವಳ ಭಾವನೆಗಳಿಗೆ, ಬದುಕಿಗೆ ನಿರ್ಧಾರಗಳಿಗೆ ಯಾವುದೇ ಬೆಲೆಯಿರುವುದಿಲ್ಲ.

ಒಟ್ಟಿನಲ್ಲಿ ಎದೆಯ ಹಣತೆ ಕಥೆಯು ಸಮಾಜಕ್ಕೆ ಅರಿವನ್ನು ಉಂಟುಮಾಡುವ, ಜಾಗೃತಿ ಮೂಡಿಸುವ ಕಥೆಯಾಗಿದೆ ಪುರುಷ ಪ್ರಧಾನವಾದ ಈ ವ್ಯವಸ್ಥೆಯಲ್ಲಿ ಹೆಣ್ಣಿಗೆ ಸಮಾನ ಅವಕಾಶಗಳನ್ನು ಒದಗಿಸಿಕೊಡಬೇಕು, ಹೆಣ್ಣಿಗೂ ಸಹ ಭಾವನೆಗಳಿವೆ ಮನಸ್ಸು ಎಂಬುದು ಇದೆ, ಅವಳ ಭಾವನೆಗಳಿಗೆ ಕುಟುಂಬ, ಸಮಾಜ ಸ್ಪಂದಿಸಲೇಬೇಕು. ಸ್ತ್ರೀ ನೆಲೆಯಲ್ಲಿಯೂ ಸಮ ಸಮಾಜದ ನಿರ್ಮಾಣದ ಕಡೆ ಸಮಾಜ ಗಮನ ಹರಿಸಬೇಕು. ಹೆಣ್ಣಿನ ಅಶೋತ್ತರಗಳಿಗೂ ಬೆಲೆ ಕೊಡುವ ರೂಢಿ ಮನಸ್ಸುಗಳು ಹೆಚ್ಚಬೇಕು ಸಂಪ್ರದಾಯದ ಚೌಕಟ್ಟುಗಳಾಚೆ ಗಂಡು–ಹೆಣ್ಣು ಇಬ್ಬರು ನಿಂತು ಬದುಕನ್ನು ಸವಿಯುವ ಬದುಕುಗಳು ರೂಪುಗೊಳ್ಳಬೇಕು, ಆಗ ಮಾತ್ರ ಎದೆಯ ಹಣತೆ ಪ್ರಜ್ವಲಿಸಲು ಸಾಧ್ಯ. ಆ ಕಡೆಗೆ ಸಮಾಜ ಹೆಜ್ಜೆ ಹಾಕಲಿ.

ಭಾರತದಲ್ಲಿ ಮಹಿಳೆಯರ ಮೇಲೆ ದಿನೇ ದಿನೇ ದೌರ್ಜನ್ಯಗಳು ಹೆಚ್ಚುತ್ತಲೇ ಇವೆ. ಪಿತೃ ಪ್ರಧಾನ ವ್ಯವಸ್ಥೆ ಪಾಲನೆಯಲ್ಲಿರುವ ನಮ್ಮ ದೇಶದಲ್ಲಿ ಹೆಣ್ಣಿನ ಮೇಲೆ ಒಂದಲ್ಲ ಒಂದು ರೀತಿ ದೌರ್ಜನ್ಯ ನಡೆಯುತ್ತಲೇ ಇದೆ. ಪಿತೃ ಪ್ರಧಾನ ವ್ಯವಸ್ಥೆಯನ್ನು ರೂಪಿಸಿಕೊಂಡು ಪುರುಷನೇ ಸಾರ್ವಭೌಮನಾಗಿದ್ದಾನೆ. ಈ ವ್ಯವಸ್ಥೆಯಲ್ಲಿ ಪುರುಷನ ನೀತಿ, ನಿಯಮ, ಕಟ್ಟಳೆಗಳಿಗೆ

ಮಹಿಳೆಯಾದವಳು ತಲೆಬಾಗಬೇಕಾಗಿದೆ. ಇದು ಪರಿಪೂರ್ಣವಾಗಿ ಬದಲಾಗಬೇಕಾಗಿದೆ. ಜಾಗತಿಕವಾಗಿ ಮಹಿಳೆಯರು ಹಲವು ರಂಗಗಳಲ್ಲಿ ಪುರುಷನನ್ನು ಮೀರಿಸಿ ಸಾಧನೆಗೈದಿದ್ದಾರೆ. ಆದರೂ ಹೆಣ್ಣಿನ ಮೇಲೆ ದೌರ್ಜನ್ಯ, ಹಲ್ಲೆಗಳು ನಡೆಯುತ್ತಲೇ ಇದೆ. ಸಾಮಾಜಿಕವಾಗಿ, ಧಾರ್ಮಿಕವಾಗಿ, ಕೌಟುಂಬಿಕವಾಗಿ ಇಂತಹ ದೌರ್ಜನ್ಯಗಳನ್ನು ಎದುರಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಕೌಟುಂಬಿಕ ಕಲಹ ಮಹಿಳೆಯ ಮೇಲೆ ಒಂದು ಗಂಭೀರ ಸಮಸ್ಯೆಯಾಗಿದ್ದು, ಇದರಿಂದ ಮಾನಸಿಕವಾಗಿ, ದೈಹಿಕವಾಗಿ ಮಹಿಳೆ ತೊಂದರೆಗೆ ಒಳಗಾಗುತ್ತಿದ್ದಾಳೆ.

*ರಾಷ್ಟ್ರೀಯ* ಮಹಿಳಾ ಆಯೋಗವು ಮಹಿಳೆಯರ ಮೇಲೆ ಆಗುತ್ತಿರುವ ದೌರ್ಜನ್ಯಗಳನ್ನು ಕುರಿತು ಬಿಡುಗಡೆ ಮಾಡಿರುವ ಅಂಕಿ ಅಂಶಗಳು ಬೆಚ್ಚಿ ಬೆಳಿಸುವಂತಿದೆ. ಇದರಲ್ಲಿ ಕೌಟುಂಬಿಕ ಹಿಂಸೆ, ಹಲ್ಲೆ, ಕ್ರಿಮಿನಲ್ ಪ್ರಕರಣಗಳು ಅಗ್ರಸ್ಥಾನವನ್ನು ಪಡೆದಿವೆ. ಇಂತಹ ಅಂಕಿ ಅಂಶಗಳು ಮಹಿಳಾ ಸುರಕ್ಷತೆಯ ಜೊತೆಗೆ, ದೇಶದ ಆಂತರಿಕ ಬೆಳವಣಿಗೆಯ ಮೇಲೂ ಪ್ರತಿಕೂಲ ಪರಿಣಾಮ ಬೀರಬಹುದು. ಪ್ರತಿ ಮೂರರಲ್ಲಿ ಓರ್ವ ಮಹಿಳೆ ತನ್ನ ಜೀವಿತಾವಧಿಯಲ್ಲಿ ದೈಹಿಕ, ಲೈಂಗಿಕ ಹಾಗೂ ಕೌಟುಂಬಿಕ ಹಿಂಸೆಯನ್ನು ಅನುಭವಿಸುತ್ತಿದ್ದಾಳೆಂದು ವಿಶ್ವಸಂಸ್ಥೆ ಕಳವಳ ವ್ಯಕ್ತಪಡಿಸಿದೆ.

2020ರಲ್ಲಿ 23272, 2021ರಲ್ಲಿ 30875, 2022ರಲ್ಲಿ 30957, 2023ರಲ್ಲಿ 30975, ಹಾಗೂ 2024ರಲ್ಲಿ 25743, 2025ರ ಏಪ್ರಿಲ್‌ವರೆಗೆ 7698 ಪ್ರಕರಣಗಳು ದಾಖಲಾಗಿವೆ.

2022 – 23ರಲ್ಲಿ ಕೌಟುಂಬಿಕ ದೌರ್ಜನ್ಯದ ಅಡಿಯಲ್ಲಿ 6916, ವರದಕ್ಷಿಣೆ ಹಿನ್ನೆಲೆಯಲ್ಲಿ 4534, ಅತ್ಯಾಚಾರ ಯತ್ನದ ಪ್ರಕರಣಗಳು 1521, ಹಾಗೂ ಘನತೆಯಿಂದ ಜೀವಿಸುವ ಹಕ್ಕಿನ ಉಲ್ಲಂಘನೆ 9166 ಪ್ರಕರಣಗಳು ದಾಖಲಾಗಿವೆ. 2023 – 24ರಲ್ಲಿ ಕೌಟುಂಬಿಕ ದೌರ್ಜನ್ಯದ ಅಡಿಯಲ್ಲಿ 6487, ವರದಕ್ಷಿಣೆ ಪ್ರಕರಣಗಳು 4815, ಅತ್ಯಾಚಾರ ಯತ್ನ ಪ್ರಕರಣಗಳು 1723, ಹಾಗೂ ಘನತೆಯಿಂದ ಜೀವಿಸುವ ಹಕ್ಕಿನ ಉಲ್ಲಂಘನೆ 8271 ಪ್ರಕರಣಗಳು ದಾಖಲಾಗಿವೆ. 2025ರ ಏಪ್ರಿಲ್‌ವರೆಗೆ ಕೌಟುಂಬಿಕ ದೌರ್ಜನ್ಯದ ಪ್ರಕರಣಗಳು 1594, ವರದಕ್ಷಿಣೆ ಪ್ರಕರಣಗಳು 916, ಅತ್ಯಾಚಾರ ಯತ್ನದ ಪ್ರಕರಣಗಳು 394 ಪ್ರಕರಣಗಳು ದಾಖಲಾಗಿವೆ.

ಪುರುಷ ಸಮಾಜ ಬದಲಾಗಬೇಕಿದೆ. ಹೆಣ್ಣನ್ನು ತನ್ನಂತೆ ಎಂದು ಬಗೆವ ಗೌರವದಿಂದ ಕಾಣುವ, ಆಕೆಯ ಬದುಕುವ ಹಕ್ಕಿಗೆ ಮನ್ನಣೆ ನೀಡುವ ಮನಗಳು ಹೆಚ್ಚಾಗಬೇಕಿದೆ. ಇಂತಹ ಕಥೆಗಳು ಓದುಗನಲ್ಲಿ ಸಮಾಜದಲ್ಲಿ ಬದಲಾವಣೆಯನ್ನು ಖಂಡಿತ ತರಬಲ್ಲವು.

**ಕೊನೆಟಿಪ್ಪಣಿಗಳು**

1. ಬಾನು ಮುಸ್ತಾಕ್. (2025). *ಹಸೀನಾ ಮತ್ತು ಇತರ ಕಥೆಗಳು.* ಪು.ಸಂ.222
2. *ಅದೇ.* ಪು.ಸಂ. 224
3. *ಅದೇ.* ಪು.ಸಂ. 226
4. ಮೀರಾ ಪಿ.ಆರ್. (ಸಂ.). (2024). *ಅವಳು....* ಪು.ಸಂ. 328
5. ಬಾನು ಮುಸ್ತಾಕ್. (2025). *ಪೂರ್ವೋಕ್ತ.* ಪು. ಸಂ.223
6. *ಅದೇ.* ಪು.ಸಂ. 226
7. ವೆಂಕಟಗಿರಿ ದಳವಾಯಿ (ಸಂ.) (2008). *ಸಂಸ್ಕೃತಿ ಮಹಿಳಾ ಮಾಲಿಕೆ.* ಸಂಪುಟ 6, ಪು.ಸಂ.16
8. ಬಾನು ಮುಸ್ತಾಕ್. (2025). *ಪೂರ್ವೋಕ್ತ.* ಪು.ಸಂ.231
9. *ಅದೇ.* ಪು.ಸಂ. 232

**ಪರಾಮರ್ಶನ ಗ್ರಂಥಗಳು**


- ಬಾನು ಮುಸ್ತಾಕ್. (2025). *ಹಸೀನಾ ಮತ್ತು ಇತರ ಕಥೆಗಳು.* ಅಭಿರುಚಿ ಪ್ರಕಾಶನ.
- ಕರಿಗೌಡ ಬೀಚನಹಳ್ಳಿ. (2003). *ಶತಮಾನದ ಸಣ್ಣ ಕಥೆಗಳ ಸಮೀಕ್ಷೆ.* ಶ್ರೀ ವೆಂಕಟೇಶ್ವರ ಪ್ರಿಂಟರ್ಸ್.
- ಮೀರಾ, ಪಿ.ಆರ್. (ಸಂ.) (2025). *ಅವಳು....* ಧರಣಿ ಪ್ರಿಂಟರ್ಸ್.
- ತೇಜಸ್ವಿನಿ ನಿರಂಜನ., ಸೀಮಂತನಿ ನಿರಂಜನ. (ಸಂ.). (2014) *ಸ್ತ್ರೀವಾದಿ ಸಾಹಿತ್ಯ ವಿಮರ್ಶೆ.* ಧರಣಿ ಪ್ರಿಂಟರ್ಸ್.
- ವೆಂಕಟಗಿರಿ ದಳವಾಯಿ (ಸಂ.) (2008). *ಸಂಸ್ಕೃತಿ ಮಹಿಳಾ ಮಾಲಿಕೆ.* ಸಂಪುಟ 6, ಪ್ರಿಂಟ್ ಪಾರ್ಕ್.